

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

# ಮುದ್ದತನೂರು ಗ್ರಾ.ಪಂ.ಗೆ ವರವಾದ JJM

ಮನೆ ಮನೆಗೆ ಗಂಗೆ
ಜಲ ಜೀವನ್ ಮಿಷನ್

## ನಳ ಸಂಪರ್ಕದಿಂದ ಹಳ್ಳಿ ಹಳ್ಳಿಗಳಿಗೂ ನಿರಂತರ ನೀರು

ಶುದ್ಧ ಕುಡಿಯುವ ನೀರು ಪ್ರತಿಯೊಬ್ಬ ನಾಗರಿಕನ ಹಕ್ಕು. ಗ್ರಾಮೀಣ ಪ್ರದೇಶದ ಜನರು ಆರೋಗ್ಯಕರ ಜೀವನಶೈಲಿಯಿಂದ ವಂಚಿತರಾಗಬಾರದು ಎಂಬ ಉದ್ದೇಶದೊಂದಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು, ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೂ ನಲ್ಲಿ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುವಲ್ಲಿ ನಿರಂತರ ಕಾರ್ಯಪ್ರವೃತವಾಗಿದೆ. ಅದರಂತೆ ಕರ್ನಾಟಕದಲ್ಲೂ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಮನೆಗೂ ಕಾರ್ಯಾತ್ಮಕ ಗೃಹನಳ ಸಂಪರ್ಕವು (FHTC) ಭರದಿಂದ ಸಾಗಿದೆ. ಈಗಾಗಲೇ ಸಾವಿರಾರು ಗ್ರಾಮಗಳ ಮನೆಮಂದಿಯೆಲ್ಲಾ ಶುದ್ಧ ಜೀವಜಲ ಕುಡಿಯುತ್ತಿದ್ದಾರೆ. ಇಂಥಾ ಗ್ರಾಮಗಳ ಪಟ್ಟಿಯಲ್ಲಿ ಮುದ್ದತನೂರು ಕೂಡಾ ಸೇರಿದೆ. ಅಷ್ಟೇ ಅಲ್ಲ ಈ ಗ್ರಾಮ ಪಂಚಾಯಿತಿಯು ಜಲ ಜೀವನ್ ಮಿಷನ್ ಯೋಜನೆಯಡಿ ವಿಶೇಷ ಮೈಲಿಗಲ್ಲು ತಲುಪಿದೆ. ಅದರತ್ತ ಚಿತ್ತ ಹರಿಸೋಣ.

**ಬಳ್ಳಾರಿ ಜಿಲ್ಲೆಯ ಮುದ್ದತನೂರು ಗ್ರಾಮ ಪಂಚಾಯಿತಿಯು ಜಲ ಜೀವನ್ ಮಿಷನ್ (JJM) ಅಡಿಯಲ್ಲಿ ಮಹತ್ವದ ಸಾಧನೆ ಮಾಡಿದೆ. ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಲ್ಲೂ**

**ಶೇಕಡಾ**

# 100ರಷ್ಟು

**ಮನೆಗಳಿಗೆ ಕಾರ್ಯಾತ್ಮಕ ಗೃಹ ನಳ ಸಂಪರ್ಕ (FHTC) ನೀಡುವ ಮೂಲಕ ರಾಜ್ಯದಲ್ಲೇ ವಿಶೇಷ ಸಾಧನೆ ಮಾಡಿದ ಹಿರಿಮೆಗೆ ಮುದ್ದತನೂರು ಗ್ರಾಮ ಪಂಚಾಯಿತಿ ಪಾತ್ರವಾಗಿದೆ. ಜೆಜೆಎಂ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು 2,612 ಮನೆಗಳಿಗೆ ನಿತ್ಯವೂ ಶುದ್ಧ ಹಾಗೂ ಸುರಕ್ಷಿತ ಕುಡಿಯುವ ನೀರು ಹರಿದು ಬರುತ್ತಿದೆ.**

## ಸುಸ್ಥಿರ ನೀರು ನಿರ್ವಹಣೆ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ಥಿರ ಅಥವಾ ವಾಲ್ಯೂಮೆಟ್ರಿಕ್ ಟ್ಯಾರಿಫ್ ವ್ಯವಸ್ಥೆ ಜಾರಿಯಲ್ಲಿದೆ. ಆ ಮೂಲಕ ನೀರಿನ ಬಳಕೆಯ ಆಧಾರದ ಮೇಲೆ ಪ್ರತಿ ಮನೆಯಿಂದ ಪ್ರತಿ ತಿಂಗಳು ನೀರಿನ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. ಇದನ್ನು ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ (VWSC) ಖಾತೆಗೆ ಜಮಾ ಮಾಡುವ ಮೂಲಕ ಸ್ಥಳೀಯರಲ್ಲಿ ಆರ್ಥಿಕ ಸದೃಢತೆ ಮೂಡಿಸಲಾಗಿದೆ.



## ಸಮುದಾಯದ ಭಾಗವಹಿಸುವಿಕೆ

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರು ಪೂರೈಸುವ ಜೊತೆಗೆ, ಜನರನ್ನು ಆರ್ಥಿಕವಾಗಿ ಸದೃಢರನ್ನಾಗಿಸುವುದು ಇಲಾಖೆಯ ಉದ್ದೇಶ. ಹೀಗಾಗಿ ಜನರನ್ನು ಆರೋಗ್ಯಕರ ಸಮುದಾಯದ ಭಾಗವಾಗಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ, ಸ್ವ-ಸಹಾಯ ಸಂಘದ ಮಹಿಳೆಯರು ಮತ್ತು ಸ್ಥಳೀಯರ ಸಹಕಾರ ಸಿಕ್ಕಿದೆ.

## ನಿರಂತರ ನೀರು ಸರಬರಾಜಿನಿಂದ ಹಲವು ಲಾಭ

ಮುದ್ದತನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರಂತರ ಶುದ್ಧ ಕುಡಿಯುವ ನೀರಿನ ಪೂರೈಕೆಯಿಂದಾಗಿ ಗ್ರಾಮೀಣ ಜನರ ಆರೋಗ್ಯ ಸುಧಾರಿಸಿದೆ. ಅಷ್ಟೇ ಅಲ್ಲದೆ, ಗ್ರಾಮದಲ್ಲಿ ಸ್ವಚ್ಛ ವಾತಾವರಣವಿದೆ. ಮನೆ ಬಾಗಿಲಿಗೆ ನೀರು ಬರುತ್ತಿರುವುದರಿಂದ ಜನರ ಅತ್ಯಮೂಲ್ಯ ಸಮಯದ ಉಳಿತಾಯವಾಗುವ ಮೂಲಕ, ಉತ್ಪಾದಕತೆ ಹೆಚ್ಚಿದೆ. ಇದು ಆರ್ಥಿಕ ಸ್ಥಿತಿ ಸುಧಾರಣೆಗೆ ಕಾರಣವಾಗುವುದರೊಂದಿಗೆ ಜನರ ಜೀವನ ಮಟ್ಟ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಶೇಕಡಾ 100ರಷ್ಟು ಕಾರ್ಯಾತ್ಮಕ ಗೃಹನಳ ಸಂಪರ್ಕದಿಂದಾಗಿ ಮುದ್ದತನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2,612 ಮನೆಗಳಿಗೆ ನೇರವಾಗಿ ಪ್ರಯೋಜನವಾಗಿದೆ.

ಮುದ್ದತನೂರು ಗ್ರಾಮ ಪಂಚಾಯಿತಿಯು ಜಲ ಜೀವನ್ ಮಿಷನ್ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಮಾದರಿಯಾಗಿದೆ. ಮೂಲಸೌಕರ್ಯ ಅಭಿವೃದ್ಧಿಯೊಂದಿಗೆ ಸಮುದಾಯ ಸಬಲೀಕರಣಕ್ಕೂ ಆದರ್ಶವಾಗಿದೆ. ಸುಸ್ಥಿರತೆ ಮತ್ತು ಉತ್ತಮ ಸೇವಾ ವಿತರಣೆಗೆ ಬದ್ಧವಾಗಿರುವ ಪಂಚಾಯಿತಿಯು ರಾಜ್ಯ ಮಾತ್ರವಲ್ಲದೆ ದೇಶದಲ್ಲೇ ಮಾದರಿ ಗ್ರಾಮವಾಗಿ ಗುರುತಿಸಿಕೊಳ್ಳಲು ಮುಂದಡಿ ಇಡುತ್ತಿದೆ.